

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **13-07-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನಾನು ಈ ದಿನ ಇಬ್ಬರು ಸಹಾಬರ ಬಗ್ಗೆ ವಿವರಿಸಲಿದ್ದೇನೆ. ಅವರಲ್ಲಿ ಒಬ್ಬರು ಹಝ್ರತ್ ಅಬೂ ಉಸೈದ್ ಮಾಲಿಕ್ ಬಿನ್ ರಬೀಅ ಸಾಯಿದಿ. ಅವರು ತಮ್ಮ ಉಪನಾಮವಾದ ಅಬೂ ಉಸೈದ್ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದಾರೆ. ಅವರು ಖಝ್‌ರಜ್ ಗೋತ್ರದ ಬನೂ ಸಅದ ಶಾಖೆಗೆ ಸೇರಿದವರಾಗಿದ್ದರು. ಅವರು ಗಿಡ್ಡ ಗಾತ್ರದವರಾಗಿದ್ದರು. ಅವರ ತಲೆಗೂದಲು ಮತ್ತು ಗಡ್ಡ ಬೆಳ್ಳಗಾಗಿತ್ತು. ವೃದ್ಧಾಪ್ಯದಲ್ಲಿ ಅವರು ದೃಷ್ಟಿಹೀನರಾಗಿದ್ದರು. ಹಿಜರಿ 60ನೇ ವರ್ಷದಲ್ಲಿ ಹಝ್ರತ್ ಮುಆವಿಯರ ಆಡಳಿತದ ಕಾಲದಲ್ಲಿ 75ನೇ ಪ್ರಾಯದಲ್ಲಿ ಅವರು ನಿಧನ ಹೊಂದಿದರು. ಬದರ್ ಯುದ್ಧದಲ್ಲಿ ಹೋರಾಡಿದ ಅನ್‌ಸಾರ್ ಸಹಾಬರ ಪೈಕಿ ಎಲ್ಲರಿಗಿಂತ ಕೊನೆಗೆ ಮೃತರಾದವರು ಅವರಾಗಿದ್ದರು. ಅವರು ಬದರ್, ಉಹುದ್, ಖಂದಕ್ ಮತ್ತು ಅನಂತರ ನಡೆದ ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿಸಿದ್ದರು. ಮಕ್ಕದ ವಿಜಯದ ಕಾಲದಲ್ಲಿ ಅವರ ಕೈಯ್ಯಲ್ಲಿ ಅಬೂ ಸಅದ ಗೋತ್ರದ ಪತಾಕೆ ಇತ್ತು. ಹಝ್ರತ್ ಸಹ್ಲ್ ಬಿನ್ ಸಅದ್ ವರದಿ ಮಾಡುತ್ತಾರೆ: ಹಝ್ರತ್ ಅಬೂ ಉಸೈದ್ ತನ್ನ ವಿವಾಹದ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಆಮಂತ್ರಣ ನೀಡಿದ್ದರು. ವಧು ಆ ದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸೇವೆ ಮಾಡುತ್ತಿದ್ದರು. ಆಹಾರ ಸಿದ್ಧಪಡಿಸುತ್ತಿದ್ದರು ಮತ್ತು ಸರಬರಾಜು ಸಹ ಮಾಡುತ್ತಿದ್ದರು. ವಿವಾಹ ಬಹಳ ಸರಳವಾಗಿತ್ತು.

ಹಝ್ರತ್ ಸುಲೈಮಾನ್ ಬಿನ್ ಯಸಾರ್ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್ ಶಹೀದರಾಗುವ ಮೊದಲು ಹಝ್ರತ್ ಅಬೂ ಉಸೈದ್ ದೃಷ್ಟಿಯನ್ನು ಕಳೆದುಕೊಂಡಿದ್ದರು. ಅವರು ಹೀಗೆ ಹೇಳುತ್ತಿದ್ದರು– ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜೀವಿಸಿದ್ದಾಗ ನನಗೆ ದೃಷ್ಟಿ ನೀಡಿದುದಕ್ಕೆ ನಾನು ಅಲ್ಲಾಹನಿಗೆ ಕೃತಜ್ಞನಾಗಿದ್ದೇನೆ. ಅವರ ಕಾಲದ ಎಲ್ಲಾ ಅನುಗ್ರಹಗಳನ್ನು ನಾನು ಕಂಡೆನು. ಅಲ್ಲಾಹನು ಜನರನ್ನು ಪರೀಕ್ಷೆಗೆ ಗುರಿಪಡಿಸಿದಾಗ ನಾನು ಅವರ ಕೆಟ್ಟ ಸ್ಥಿತಿಯನ್ನು ನೋಡದಿರುವಂತೆ ನನ್ನ ದೃಷ್ಟಿಯನ್ನು ಅಲ್ಲಾಹನು ಕೊನೆಗೊಳಿಸಿದನು.

ಮರ್‌ವಾನ್ ಬಿನ್ ಅಲ್ ಹಕಮ್‌ರವರು ಹಝ್ರತ್ ಅಬೂ ಉಸೈದರನ್ನು ಸದಖದ ನಿರ್ವಾಹಕರಾಗಿ ಮಾಡಿದ್ದರು. ಎಂದರೆ ಸಂಗ್ರಹಿಸಲು ಮತ್ತು ವಿತರಣೆ ಮಾಡಲು. ಹಝ್ರತ್ ಅಬೂ ಉಸೈದ್ ಒಮ್ಮೆ ಝಕಾತ್ ಸಾಮಗ್ರಿಗಳನ್ನು ವಿತರಣೆ ಮಾಡಿ ಮನೆಗೆ ಹೋದರು. ರಾತ್ರಿ ಅವರಿಗೆ ಸ್ವಪ್ನದಲ್ಲಿ ಒಂದು ಹಾವು ಅವರ ಕೊರಳನ್ನು ಸುತ್ತಿರುವುದಾಗಿ ಕಂಡರು. ಅವರು ಗಾಬರಿಗೊಂಡು ಎದ್ದು ಕೇಳಿದರು: ವಿತರಣೆಯಾಗದೆ ಯಾವುದಾದರೂ ವಸ್ತು ಬಾಕಿಯಾಗಿ ಉಳಿದಿದೆಯೇ? ಅವರ ಪತ್ನಿ ಹೇಳಿದರು: ಇಲ್ಲ ಎಂದು. ಹಝ್ರತ್ ಅಬೂ ಉಸೈದ್ ಹೇಳಿದರು: ಮತ್ತೆ ನನ್ನ ಕೊರಳಿಗೆ ಹಾವು ಸುತ್ತಿದ ಕಾರಣವೇನು? ನೀನು ನೋಡು ಪ್ರಾಯಶಃ ಏನಾದರೂ ಬಾಕಿಯಾಗಿರಬಹುದು. ಆಗ ಅವರ ಪತ್ನಿ ಹೇಳಿದರು: ಒಂಟೆಯನ್ನು ಕಟ್ಟುವ ಒಂದು ಹಗ್ಗ ಇದೆ ಎಂದು. ಆಗ ಹಝ್ರತ್ ಅಬೂ ಉಸೈದ್ ಆ ಹಗ್ಗವನ್ನು ತೆಗೆದುಕೊಂಡು ಹೋಗಿ ಕೊಟ್ಟರು.

ಅಲ್ಲಾಹನು ಆ ಸಹಾಬರನ್ನು ಅತ್ಯಂತ ಸೂಕ್ಷ್ಮವಾದ ಮಾನದಂಡವನ್ನು ಪಾಲಿಸುವಂತೆ ಮಾಡಿ ವಿಶ್ವಸ್ತತೆಯ ಅತ್ಯಂತ ಉನ್ನತ ಮಟ್ಟವನ್ನು ತಲಪುವಂತೆ ಮಾಡಲು ಇಚ್ಛಿಸುತ್ತಿದ್ದನು. ಇದೇ ಕಾರಣದಿಂದ ಅಲ್ಲಾಹನು ಸ್ವಪ್ನಗಳ ಮೂಲಕ ಸಹ ಅವರಿಗೆ ಮಾರ್ಗದರ್ಶನ ನೀಡುತ್ತಿದ್ದನು. ಒಮ್ಮೆ ಕೆಲವು ತರುಣರು ಹಝ್ರತ್ ಅಬೂ ಉಸೈದರೊಂದಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನ್‌ಸಾರ್‌ಗಳ ಶ್ರೇಷ್ಠತೆ ಬಗ್ಗೆ ಏನು ಹೇಳಿದರೆಂದು ವಿವರಿಸಲು ಅಪೇಕ್ಷಿಸಿದಾಗ ಹಝ್ರತ್ ಅಬೂ ಉಸೈದ್ ಹೇಳಿದರು: ಅನ್‌ಸಾರ್‌ಗಳ ಎಲ್ಲಾ ಗೋತ್ರಗಳ ಪೈಕಿ ಪ್ರಥಮ ಸ್ಥಾನ ಬನೂ ನಜ್ಜಾದ್ ಕುಲದವರಿಗಿದೆ. ಅನಂತರದ ಸ್ಥಾನಗಳು ಬನೂ ಅಬ್ದುಲ್ ಅಶ್‌ಅಲ್, ಬನೂ ಆರಿಝ್ ಬಿನ್ ಖಝ್‌ರಜ್, ಬನೂ ಸಾಯಿದ ಕುಲದವರಿಗಿದೆ. ಅನ್‌ಸಾರ್‌ಗಳ ಎಲ್ಲಾ ಕುಲಗಳ ಜನರಿಗೆ ಒಳಿತುಗಳೇ ಇವೆ ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದುದಾಗಿ ನಾನು ಆಲಿಸಿರುವೆನು.

ನಾನು ವಿವರಿಸಲಿರುವ ಮತ್ತೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಅಬ್ದುಲ್ ಅಸದ್ ಆಗಿದ್ದಾರೆ. ಅವರ ಉಪನಾಮ ಅಬೂ ಸಲ್ಮ ಎಂದು. ಅವರ ತಾಯಿ ಬಿರ್ರ ಬಿನ್ತ್ ಅಬ್ದುಲ್ ಮತ್ತಲಿಬ್. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೊಡ್ಡಮ್ಮನ ಪುತ್ರರಾಗಿದ್ದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಹಮ್‌ಝರವರ ಹಾಲೂಡುವಿಕೆಗೆ ಸಂಬಂಧಿಸಿದ ಸಹೋದರರೂ ಆಗಿದ್ದರು. ಅವರು ಅಬೂಲಹಬನ ಗುಲಾಮ ಸ್ತ್ರೀಯಾಗಿದ್ದ ಸವೀಬಳ ಮೊಲೆಹಾಲು ಕುಡಿದಿದ್ದರು. ಹಝ್ರತ್ ಉಮ್ಮುಲ್ ಮೂಮಿನೀನ್ ಉಮ್ಮು ಸಲ್ಮ ಮೊದಲು ಅವರನ್ನು ವಿವಾಹವಾಗಿದ್ದರು. ಅಬೂ ಸಲ್ಮ ನಿಧನರಾದಾಗ ಅವರ ವಿಧವೆ ಉಮ್ಮು ಸಲ್ಮರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿವಾಹವಾದರು.

ಇಬ್ನು ಇಸ್‌ಹಾಖ್ ಹೇಳುತ್ತಾರೆ: ಅಬೂ ಸಲ್ಮ ಪ್ರಾರಂಭದ ಹತ್ತು ಜನರ ನಂತರ ಮುಸ್ಲಿಮರಾದರು. ಅವರು ತನ್ನ ಪತ್ನಿ ಹಝ್ರತ್ ಉಮ್ಮು ಸಲ್ಮಾರೊಂದಿಗೆ ಅಬಿಸೀನಿಯಾದ ಪ್ರಥಮ ವಲಸೆಗಾರರಲ್ಲಿ ಸೇರಿದ್ದರು. ಮಕ್ಕಕ್ಕೆ ಮರಳಿ ಬಂದ ನಂತರ ಮದೀನಕ್ಕೆ ವಲಸೆ ಹೋದರು. ಮಕ್ಕದಲ್ಲಿ ಮುಸ್ಲಿಮರಿಗೆ ಕಷ್ಟಗಳು ಅತ್ಯಂತ ಹೆಚ್ಚಾದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಸಾಧ್ಯವಿರುವವರು ಅಬಿಸೀನಿಯಾ ದೇಶಕ್ಕೆ ವಲಸೆ ಹೋಗಬೇಕು ಎಂದು. ಹಾಗೆ ನಬವಿ ವರ್ಷ 5 ರಜಬ್ ತಿಂಗಳಲ್ಲಿ ಹನ್ನೊಂದು ಪುರುಷರು ಮತ್ತು ನಾಲ್ಕು ಮಹಿಳೆಯರು ಅಬಿಸೀನಿಯಾ ದೇಶಕ್ಕೆ ವಲಸೆ ಹೋದರು. ಅವರಲ್ಲಿ ಪ್ರಮುಖರು ಇವರಾಗಿದ್ದಾರೆ: ಉಸ್ಮಾನ್ ಬಿನ್ ಅಫ್ಫಾನ್ ಮತ್ತು ಅವರ ಪತ್ನಿ ರುಖಿಯಾ ಬಿನ್ತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಅಬ್ದುರ್ರಹ್ಮಾನ್ ಬಿನ್ ಔಫ್, ಝುಬೈರ್ ಬಿನ್ ಅಲ್ ಅವಾಮ್, ಅಬೂ ಹುಝೈಫ ಬಿನ್ ಉತ್‌ಬ, ಉಸ್ಮಾನ್ ಬಿನ್ ಮಝ್‌ಊನ್, ಮುಸ್‌ಇಬ್ ಬಿನ್ ಉಮೈರ್, ಅಬೂ ಸಲ್ಮಾ ಮತ್ತು ಅವರ ಪತ್ನಿ ಉಮ್ಮು ಸಲ್ಮಾ.

ಆಶ್ಚರ್ಯಕರವಾದುದೇನೆಂದರೆ ಮಕ್ಕದಿಂದ ಪ್ರಾರಂಭ ಕಾಲದಲ್ಲಿ ವಲಸೆ ಹೋದವರಲ್ಲಿ ಹೆಚ್ಚಿನ ಸಂಖ್ಯೆಯ ಜನರು ಖುರೈಶ್ ವಂಶದ ಶಕ್ತಿಶಾಲಿ ಗೋತ್ರಗಳಿಗೆ ಸೇರಿದವರಾಗಿದ್ದರು. ಬಲಹೀನ ಜನರು ಕಡಿಮೆ ಸಂಖ್ಯೆಯಲ್ಲಿದ್ದರು. ಇದರಿಂದ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಶಕ್ತಿಶಾಲಿ ಗೋತ್ರಗಳಿಗೆ ಸೇರಿದವರು ಸಹ ಖುರೈಶರ ದೌರ್ಜನ್ಯಗಳಿಂದ ಸುರಕ್ಷಿತರಾಗಿರಲಿಲ್ಲ. ಎರಡನೆಯ ವಿಷಯವೇನೆಂದರೆ ಬಲಹೀನರಾದ, ಗುಲಾಮರು ಮೊದಲಾದವರು, ಎಷ್ಟು ಬಲಹೀನ ಸ್ಥಿತಿಯಲ್ಲಿದ್ದರೆಂದರೆ ಅವರಿಗೆ ವಲಸೆ ಹೋಗುವ ಶಕ್ತಿಯೇ ಇರಲಿಲ್ಲ. ಮಕ್ಕದ ಖುರೈಶರಿಗೆ ಮುಸ್ಲಿಮರು ವಲಸೆ ಹೋಗುತ್ತಿರುವ ಸಮಾಚಾರ ದೊರಕಿದಾಗ ಅವರು ತಮ್ಮ ಬೇಟೆಗೆ ಬಲಿಯಾಗಲಿರುವವರು ಸುಲಭವಾಗಿ ತಪ್ಪಿಸಿಕೊಂಡು ಹೋದ ಬಗ್ಗೆ ಬಹಳ ದಿಗ್ಭ್ರಮೆ ಹೊಂದಿದರು. ಅಬಿಸೀನಿಯಾದಲ್ಲಿ ಮುಸ್ಲಿಮರಿಗೆ ಬಹಳ ನೆಮ್ಮದಿ ದೊರಕಿತು. ಅಲ್ಲಾಹನು ಅವರನ್ನು ಖುರೈಶರ ದೌರ್ಜನ್ಯಗಳಿಂದ ರಕ್ಷಿಸಿದ ಬಗ್ಗೆ ಅವರು ಕೃತಜ್ಞರಾದರು.

ಇಬ್ನು ಇಸ್‌ಹಾಖ್ ಬರೆಯುತ್ತಾರೆ: ಹಝ್ರತ್ ಅಬೂ ಸಲ್ಮಾ ಅಬಿಸೀನಿಯಾದಿಂದ ಮರಳಿ ಬಂದಾಗ ಹಝ್ರತ್ ಅಬೂ ತಾಲಿಬರಿಂದ ಆಶ್ರಯ ಬೇಡಿದರು. ಆಗ ಬನೂ ಮಖ್ಝೂಮ್ ಗೋತ್ರದ ಕೆಲವರು ಅಬೂ ತಾಲಿಬರ ಬಳಿಗೆ ಹೋಗಿ ಹೇಳಿದರು: ನೀವು ನಿಮ್ಮ ಸಹೋದರ ಪುತ್ರ ಮುಹಮ್ಮದರಿಗೆ ಅಭಯ ನೀಡಿರುವಿರಿ. ಆದರೆ ನಮ್ಮ ಸಹೋದರ ಅಬೂ ಸಲ್ಮನಿಗೆ ಏಕೆ ಅಭಯ ನೀಡಿದಿರಿ? ಅಬೂತಾಲಿಬ್ ಹೇಳಿದರು: ಅವನು ನನ್ನಿಂದ ಆಶ್ರಯ ಬೇಡಿದ್ದಾನೆ. ಅವನು ನನ್ನ ಸಹೋದರಿ ಪುತ್ರನೂ ಆಗಿದ್ದಾನೆ. ನಾನು ನನ್ನ ಸಹೋದರ ಪುತ್ರನಿಗೆ ಆಶ್ರಯ ನೀಡದಿರುತ್ತಿದ್ದರೆ ಸಹೋದರಿ ಪುತ್ರನಿಗೂ ಆಶ್ರಯ ನೀಡುತ್ತಿರಲಿಲ್ಲ ಎಂದು ಹೇಳಿದರು.

ಇಬ್ನು ಇಸ್‌ಹಾಖ್ ಹೇಳುತ್ತಾರೆ: ಉಮ್ಮುಲ್ ಮೂಮಿನೀನ್ ಹಝ್ರತ್ ಉಮ್ಮು ಸಲ್ಮ ವರದಿ ಮಾಡುತ್ತಾರೆ: ನನ್ನ ಪತಿ ಅಬೂ ಸಲ್ಮಾ ಮದೀನಕ್ಕೆ ಹೋಗಲು ಒಂಟೆಯನ್ನು ಸಿದ್ಧಪಡಿಸಿ ನನ್ನನ್ನು ಮತ್ತು ನನ್ನ ಮಡಿಲಲ್ಲಿದ್ದ ಮಗನನ್ನು ಒಂಟೆಯ ಮೇಲೆ ಸವಾರಿ ಮಾಡಿಸಿ ಮುಂದೆ ಸಾಗಿದಾಗ ಬನೂ ಮಖ್ಝೂಮ್ ಗೋತ್ರದ ಕೆಲವರು ನಮ್ಮನ್ನು ತಡೆದು ಹೇಳಿದರು: ಉಮ್ಮು ಸಲ್ಮ ನಮ್ಮ ಹುಡುಗಿ, ಅವಳನ್ನು ನಿನ್ನ ಜೊತೆ ಸಂಚರಿಸಲು ಬಿಡಲಾರೆವು. ಉಮ್ಮು ಸಲ್ಮ ಹೇಳುತ್ತಾರೆ: ಆ ಜನರು ನನ್ನ ಪತಿಯನ್ನು ನನ್ನಿಂದ ಬೇರ್ಪಡಿಸಿದರು. ಹಝ್ರತ್ ಅಬೂ ಸಲ್ಮರವರ ಗೋತ್ರದ ಜನರು ಈ ವಿಷಯ ತಿಳಿದು ಕೋಪಗೊಂಡು ಹೇಳಿದರು ಈ ಮಗು ಅಬೂ ಸಲ್ಮನ ಮಗನಾಗಿದ್ದಾನೆ. ಅವನನ್ನು ನಿಮ್ಮ ಜೊತೆ ಬಿಡಲಾರೆವು. ಹಾಗೆ ಅವರು ನನ್ನ ಮಗನನ್ನು ತೆಗೆದುಕೊಂಡು ಹೋದರು. ಉಮ್ಮು ಸಲ್ಮರನ್ನು ಆಕೆಯ ಗೋತ್ರದವರು, ಮಗುವನ್ನು ಆಕೆಯ ಪತಿಯ ಗೋತ್ರದವರು ತೆಗೆದುಕೊಂಡು ಹೋದರು. ಉಮ್ಮು ಸಲ್ಮ ಹೇಳುತ್ತಾರೆ: ನಾನು ಒಂದು ವರ್ಷದ ತನಕ ಏಕಾಕಿಯಾಗಿ ಕಷ್ಟವನ್ನು ಅನುಭವಿಸಿದೆ. ನಾನು ಪ್ರತಿದಿನ ಅಬತ್ತ ಎಂಬ ಸ್ಥಳಕ್ಕೆ ಹೋಗಿ ರೋದಿಸುತ್ತಿದ್ದೆ. ಒಂದು ದಿನ ನನ್ನ ಚಿಕ್ಕಪ್ಪನ ಒಬ್ಬ ಮಗ ನನ್ನನ್ನು ಅಳುತ್ತಾ ಕಂಡಾಗ ಅವನಿಗೆ ದುಃಖವಾಯಿತು. ಅವನು ನನ್ನ ಕುಲವಾದ ಬನೂ ಮುಗೈರರ ಜನರೊಂದಿಗೆ ಹೇಳಿದನು: ನೀವು ಈ ಬಡ ಮಹಿಳೆಗೆ ಏಕೆ ತೊಂದರೆ ನೀಡುತ್ತಿರುವಿರಿ. ನೀವು ಅವಳ ಪತಿಯನ್ನೂ ಮಗನನ್ನೂ ಅವಳಿಂದ ಬೇರ್ಪಡಿಸಿರುವಿರಿ. ಅವಳನ್ನು ಬಿಟ್ಟುಬಿಡಿರಿ. ಆಗ ಅವರು ಹೇಳಿದರು: ನೀನು ನಿನ್ನ ಪತಿಯ ಬಳಿಗೆ ಹೋಗು. ಅನಂತರ ಬನೀ ಅಬ್ದುಲ್ ಅಸದ್ ಗೋತ್ರದವರು ನನ್ನ ಮಗನನ್ನು ನನಗೆ ಮರಳಿ ನೀಡಿದರು. ನಾನು ಒಂಟೆಯೇರಿ ಮದೀನದ ಕಡೆಗೆ ಹೊರಟಾಗ ನನ್ನ ಜೊತೆ ಸಹಾಯಕರಾಗಿ ಆಗ ಯಾರೂ ಇರಲಿಲ್ಲ. ನಾನು ತನ್‌ಈಮ್‌ಗೆ ತಲಪಿದಾಗ ಅಲ್ಲಿ ಉಸ್ಮಾನ್ ಬಿನ್ ಅಬೂ ತಲ್‌ಹರನ್ನು ಕಂಡೆನು. ಆಗ ಅವರು ಮುಸ್ಲಿಮರಾಗಿರಲಿಲ್ಲ. ಅವರು ಹಿಜರಿ 6ರಲ್ಲಿ ಮುಸ್ಲಿಮರಾದವರು. ಅವರು ಕೇಳಿದರು: ಉಮ್ಮು ಸಲ್ಮ ಎಲ್ಲಿಗೆ ಹೋಗುತ್ತಿರುವೆ. ನಾನು ಹೇಳಿದೆ: ಮದೀನಕ್ಕೆ ನನ್ನ ಪತಿಯ ಬಳಿಗೆ ಹೋಗುತ್ತಿದ್ದೇನೆ. ಅವರು ಕೇಳಿದರು: ನಿನ್ನ ಜೊತೆ ಯಾರಿದ್ದಾರೆ. ನಾನು ಹೇಳಿದೆ: ಅಲ್ಲಾಹನಾಣೆ ನನ್ನ ಈ ಮಗ ಮತ್ತು ಅಲ್ಲಾಹನು ಮಾತ್ರ ನನ್ನ ಜೊತೆಗಿದ್ದಾರೆ. ಉಸ್ಮಾನ್ ಹೇಳಿದರು: ಅಲ್ಲಾಹನಾಣೆ ನಿನ್ನನ್ನು ಹೀಗೆ ಏಕಾಂಗಿಯಾಗಿ ಹೋಗಲು ಖಂಡಿತ ಬಿಡಲಾರೆ. ನಾನು ನಿನ್ನ ಜೊತೆಗೆ ಬರುತ್ತೇನೆ. ಅವರು ನನ್ನ ಒಂಟೆಯ ಹಗ್ಗ ಹಿಡಿದರು. ಉಮ್ಮು ಸಲ್ಮ ಹೇಳುತ್ತಾರೆ: ಅಲ್ಲಾಹನಾಣೆ ಅರಬಿಗಳಲ್ಲಿ ಅವರಷ್ಟು ಗೌರವಾರ್ಹರಾಗಿ ಯಾರನ್ನೂ ನಾನು ಕಂಡಿಲ್ಲ. ಪ್ರಯಾಣ ಪ್ರಾರಂಭಿಸುವಾಗ ಅವರು ಒಂಟೆಯನ್ನು ಸಿದ್ಧಪಡಿಸುತ್ತಿದ್ದರು. ನಾನು ಒಂಟೆ ಏರುತ್ತಿದ್ದೆ. ಅವರು ಕಡಿವಾಗಿ ಹಿಡಿದು ಸಾಗುತ್ತಿದ್ದರು. ಆ ರೀತಿ ನಾವು ಮದೀನಕ್ಕೆ ತಲಪಿದೆವು. ಹಿಜ್‌ರತ್‌ನ ಎರಡನೆ ವರ್ಷ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಶೀರ ಯುದ್ಧಕ್ಕೆ ಹೊರಟಾಗ ಅಬೂ ಸಲ್ಮರನ್ನು ಮದೀನದ ಅಮೀರರನ್ನಾಗಿ ನೇಮಿಸಿದ್ದರು.

ಸೀರತ್ ಖಾತಮುನ್ನಬಿಯ್ಯೀನ್ ಗ್ರಂಥದಲ್ಲಿ ಹೀಗೆ ಬರೆದಿದೆ: ಹಿಜರಿ 4 ಮುಹರ್‍ರಮ್ ತಿಂಗಳಲ್ಲಿ ಹಝ್ರತ್

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮದೀನದಲ್ಲಿ ಸಮಾಚಾರ ಲಭಿಸಿತು: ಅಸದ್ ಗೋತ್ರದ ಮುಖಂಡ ತಲೀಹ್ ಬಿನ್ ಖುವೈಲಿದ್ ಮತ್ತು ಅವನ ಸಹೋದರ ಸಲ್ಮ ಬಿನ್ ಖುವೈಲಿದ್ ತಮ್ಮ ಪ್ರದೇಶದ ಜನರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಯುದ್ಧ ಮಾಡಲು ಉದ್ರೇಕಿಸುತ್ತಿದ್ದಾರೆ ಎಂದು. ತಕ್ಷಣ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೂರೈವತ್ತು ಸಹಾಬರ ಒಂದು ದಳವನ್ನು ರಚಿಸಿ ಅದರ ದಳಪತಿಯಾಗಿ ಅಬೂ ಸಲ್ಮರನ್ನು ನೇಮಿಸಿ ಹೇಳಿದರು: ಬನೂ ಅಸದ್ ಗೋತ್ರದವರು ಯುದ್ಧ ಪ್ರಾರಂಭಿಸುವ ಮೊದಲೇ ಅವರನ್ನು ಚದುರಿಸಿ ಬಿಡಿರಿ. ಅಬೂ ಸಲ್ಮ ಶತ್ರುಗಳನ್ನು ಖತನ್ ಎಂಬಲ್ಲಿ ಕಂಡರು. ಆದರೆ ಯುದ್ಧವಾಗಲಿಲ್ಲ. ಅಬೂ ಸಲ್ಮ ಮದೀನಕ್ಕೆ ಮರಳಿದರು. ಈ ಪ್ರಯಾಣದ ಅಸಾಧಾರಣ ಕಷ್ಟದ ಕಾರಣ ಅಬೂ ಸಲ್ಮ ಉಹುದ್ ಯುದ್ಧದಲ್ಲಿ ಹೊಂದಿದ್ದ ಗಾಯ ಬಾಹ್ಯವಾಗಿ ಒಣಗಿದ್ದರೂ ಪುನಃ ಕೆಟ್ಟಿತು. ಅದು ಗುಣವಾಗಲಿಲ್ಲ. ಅವರು ಇದೇ ರೋಗದಿಂದ ಮೃತರಾದರು. ಅವರನ್ನು ಮದೀನದಲ್ಲಿ ದಫನ್ ಮಾಡಲಾಗಿತ್ತು. ಒಂದು ವರದಿ ಹೀಗಿದೆ: ಅವರು ಮರಣಾಸನ್ನರಾಗಿದ್ದಾಗ ಹೀಗೆ ಪ್ರಾರ್ಥಿಸಿದರು: ನನ್ನ ಕುಟುಂಬದಲ್ಲಿ ನನ್ನ ಪ್ರತಿನಿಧಿಯಾಗಿ ಅತ್ಯುತ್ತಮ ವ್ಯಕ್ತಿಯನ್ನು ನೇಮಿಸು. ಈ ಪ್ರಾರ್ಥನೆ ಅಂಗೀಕರಿಸಲ್ಪಟ್ಟಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಮ್ಮು ಸಲ್ಮರನ್ನು ವಿವಾಹವಾದರು.

ಉಮ್ಮು ಸಲ್ಮ ವೈಶಿಷ್ಟ್ಯ ಪೂರ್ಣ ಮಹಿಳೆಯಾಗಿದ್ದರು. ಅತ್ಯಂತ ಬುದ್ಧಿಶಾಲಿಯೂ ಪರಿಶುದ್ಧೆಯೂ ಆಗಿದ್ದರು. ವಿಶ್ವಾಸ ಮತ್ತು ನಿಷ್ಠೆಯಲ್ಲಿ ಉನ್ನತ ಪದವಿ ಗಳಿಸಿದ್ದರು. ಹಝ್ರತ್ ಉಮ್ಮು ಸಲ್ಮರಿಗೆ ಓದಲು ತಿಳಿದಿತ್ತು. ಅವರು ಮುಸ್ಲಿಮ್ ಮಹಿಳೆಯರ ವಿದ್ಯಾಭ್ಯಾಸ ಮತ್ತು ತರಬೇತಿಗೆ ವಿಶಿಷ್ಟವಾಗಿ ಪ್ರಯತ್ನಿಸಿದ್ದರು. ಹದೀಸು ಗ್ರಂಥಗಳಲ್ಲಿ ಅವರಿಂದ ವರದಿಯಾದ ಅನೇಕ ಹದೀಸುಗಳಿವೆ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿಯರಲ್ಲಿ ದ್ವಿತೀಯ ಸ್ಥಾನದಲ್ಲಿದ್ದಾರೆ. ಪುರುಷ ಮತ್ತು ಮಹಿಳೆಯರಾದ ಎಲ್ಲಾ ಸಹಾಬರಲ್ಲಿ ಅವರು ಹನ್ನೆರಡನೆಯ ಸ್ಥಾನದಲ್ಲಿದ್ದಾರೆ.

ಅಲ್ಲಾಹನು ಈ ಸಹಾಬರಿಗೆ ಇನ್ನಷ್ಟು ಉನ್ನತ ಪದವಿಯನ್ನು ದಯಪಾಲಿಸುತ್ತಾ ಇರಲಿ. ಅವರು ಮಾಡಿದ ಸತ್ಕರ್ಮಗಳನ್ನು ಮಾಡುವ ಭಾಗ್ಯ ನಮಗೆ ಸಹ ದೊರಕುವಂತಾಗಲಿ – ಆಮೀನ್.

ಈಗ ನಿಧನ ಹೊಂದಿದ ಕೆಲವರ ಬಗ್ಗೆ ಪ್ರಸ್ತಾಪಿಸುವೆನು. ಅವರೆಲ್ಲರ ನಮಾಝೆ ಜನಾಝ ನಿರ್ವಹಿಸುವೆನು. ಮೊದಲನೆಯದಾಗಿ ಮುಕರ್ರಮ್ ರಾಜ ನಸೀರ್ ಅಹ್ಮದ್ ಸಾಹಿಬ್ ನಾಸಿರ್. ಅವರು ವಾಕಿಫೆ ಝಿಂದಗಿಯಾಗಿದ್ದರು. ಅವರು ಮುರಬ್ಬಿಯೂ ಮಾಜಿ ನಾಝಿರ್ ಇಸ್ಲಾಹೋ ಇರ್‌ಶಾದ್ ಮರ್ಕಝಿಯ ಸಹ ಆಗಿದ್ದರು. 2018 ಜುಲಾಯಿ 8ರಂದು ಅವರು ತನ್ನ 80ನೇ ವಯಸ್ಸಿನಲ್ಲಿ ತಾಹಿರ್ ಹಾರ್ಟ್ ಇನ್ಸಿಟ್ಯೂಟ್ ರಬ್ವದಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾಇಲೈಹಿ ರಾಜಿಊನ್.** ಅವರು 1938 ಮೇ 7ರಂದು ಸರ್ಗೋಧ ಜಿಲ್ಲೆಯ ಭೇರದಲ್ಲಿ ಜನಿಸಿದರು. 1958ರಲ್ಲಿ ಝಿಂದಗಿ ವಕ್ಫ್ ಮಾಡಿದರು. ಜಾಮಿಅದಲ್ಲಿ ವಿದ್ಯಾಭ್ಯಾಸದ ನಂತರ 47 ವರ್ಷಗಳ ಕಾಲ ಜಮಾಅತಿಗೆ ಸೇವೆ ಸಲ್ಲಿಸಿದರು. ಅವರು ವಿವಿಧ ಸ್ಥಳಗಳಲ್ಲಿ ಮುರಬ್ಬಿ ಆಗಿದ್ದರು. 2012ರಲ್ಲಿ ನಿವೃತ್ತರಾದರು. ಪವಿತ್ರ ಖುರ್‌ಆನ್ ತಿಲಾವತ್ ಮಾಡುವ ಬಹಳ ಅಭಿರುಚಿ ಅವರಿಗಿತ್ತು. ಅವರು ತಮ್ಮ ಮಕ್ಕಳಿಗೆ ಯಾವಾಗಲೂ ಉಪದೇಶಿಸುತ್ತಿದ್ದರು– ಎಂದೂ ಶಿರ್ಕ್ ಮಾಡಬೇಡಿರಿ, ಖಿಲಾಫತ್‌ನೊಂದಿಗೆ ಯಾವಾಗಲೂ ಸಂಬಂಧವಿರಿಸಿರಿ ಎಂದು. ಅವರು ಹೀಗೆಯೇ ಜೀವಿಸಿದ್ದರು. ಅಲ್ಲಾಹನು ಅವರಿಗೆ ಕಾರುಣ್ಯ ದಯಪಾಲಿಸಲಿ. ಅವರ ಮಕ್ಕಳು ಸಹ ಅವರ ಸದ್ಗುಣಗಳನ್ನೂ ಸತ್ಕರ್ಮಗಳನ್ನೂ ಜಾರಿಗೊಳಿಸುವ ಭಾಗ್ಯ ಗಳಿಸುವವರಾಗಲಿ.

ಇನ್ನೆರಡು ಜನಾಝಗಳು, ಮುಕರ್ರಮ್ ಮುಬೀನ್ ಅಹ್ಮದ್ ಸಾಹಿಬ್ ಮತ್ತು ಮುಕರ್ರಮ್ ಮುಹಮ್ಮದ್ ಝುಫರುಲ್ಲಾ ಸಾಹಿಬ್ ಬಿನ್ ಲಿಯಾಕತ್ ಅಲಿ ಸಾಹಿಬರದಾಗಿವೆ. 2018 ಜುಲಾಯಿ 7ರಂದು ಮಧ್ಯಾಹ್ನ 3 ಗಂಟೆಗೆ ಕರಾಚಿಯ ವೀಟಾ ಚೌಕ್ ಚಾರಂಗೀ ಇಂಡಸ್ಟ್ರೀಯಲ್ ಏರಿಯಾದಲ್ಲಿ ಡಕಾಯಿತರು ಗುಂಡು ಹೊಡೆದು ಮೂವರು ಅಹ್ಮದಿಯರಾದ ಮುಬೀನ್ ಅಹ್ಮದ್, ಝುಫರುಲ್ಲಾ ಮತ್ತು ಮುಹಮ್ಮದ್ ನಸ್ರುಲ್ಲಾರನ್ನು ಗಾಯಗೊಳಿಸಿದರು. ಅವರ ಪೈಕಿ ಮುಬೀನ್ ಅಹ್ಮದ್ ಮತ್ತು ಝುಫರುಲ್ಲಾ ಶಹೀದರಾದರು. **ಇನ್ನಾಲಿಲ್ಲಾಹಿ ವಇನ್ನಾಇಲೈಹಿ ರಾಜಿಊನ್.** ಗಾಯಗೊಂಡ ಹಾಫಿಝ್ ನಸ್ರುಲ್ಲಾ ಖಾನರಿಗೆ ಆಪರೇಶನ್ ಮಾಡಲಾಗಿದೆ, ಅವರು ಆಸ್ಪತ್ರೆಯಲ್ಲಿದ್ದಾರೆ. ಅಲ್ಲಾಹನು ಅವರನ್ನು ಗುಣಪಡಿಸಲಿ. ಮೃತರ ಪದವಿಗಳನ್ನು ಅಲ್ಲಾಹನು ಉನ್ನತಗೊಳಿಸುತ್ತಾ ಇರಲಿ. ಬಂಧುಗಳಿಗೆ ಅಲ್ಲಾಹನು ಸಹನೆಯನ್ನೂ ಧೈರ್ಯವನ್ನೂ ದಯಪಾಲಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 13-07-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon